OCTOBER 25, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

<><><>

- **ಸರ್ವೋಚ್ಚ ನ್ಯಾಯಾಲಯದ** ತೀರ್ಪುಗಳನ್ನು, ಕನ್ನಡದಲ್ಲಿ ಲಭ್ಯವಾಗಿಸಲು, ಕ್ರಮ – ನ್ಯಾಯಮೂರ್ತಿ, ಪ್ರಸನ್ನ ವರಾಳೆ.
- **ಧಾರವಾಡ ಐ.ಐ.ಟಿ.:** ಕೇಂದ್ರ ಶಿಕ್ಷಣ ಖಾತೆ ಸಚಿವ, ಪ್ರಲ್ಹಾದ ಜೋಶಿ ಅವರಿಂದ, ಶೈಕ್ಷಣಿಕ ಪ್ರಗತಿ, ಪರಿಶೀಲನೆ.
- **ಉತ್ತರಕನ್ನಡ ಜಿಲ್ಲೆ, ದೇವಬಾಗ** ಸಸ್ಯೋದ್ಯಾನದಲ್ಲಿ, 5 ಪ್ರಜಾತಿಯ ಕಾಂಡ್ಲ ಸಸಿಗಳ ಪೋಷಣೆ.
- **ಪ್ರಧಾನಮಂತ್ರಿಯವರ, 'ಮನ್ ಕಿ ಬಾತ್':** ಇಂದು, ಬೆಳಗ್ಗೆ 11 ಗಂಟೆಗೆ, ಪ್ರಸಾರ.

<><><>

ಈಗ ವಾರ್ತೆಗಳ ವಿವರ

<><><>

ಸರ್ವೋಚ್ಚ ನ್ಯಾಯಾಲಯ, ತನ್ನ ತೀರ್ಪುಗಳನ್ನು ಕನ್ನಡ ಸೇರಿದಂತೆ, ಪ್ರಾದೇಶಿಕ ಭಾ ೆಗಳಲ್ಲಿ ಲಭ್ಯವಾಗಿಸಿದೆ. ಡಾಕ್ಟರ್ ಅಂಬೇಡ್ಕರ ಅವರ ಸಂವಿಧಾನದ ಆಶಯಗಳನ್ನು, ದೇಶದ ಮೂಲೆ ಮೂಲೆಗೂ ತಲುಪಿಸಲು, ಬದ್ಧವಾಗಿದೆ ಎಂದು, ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ, ಪ್ರಸನ್ನ ವರಾಳೆ, ಹೇಳಿದ್ದಾರೆ. ಚಿತ್ರದುರ್ಗದ ಸರಸ್ವತಿ ವಿದ್ಯಾ ಸಂಸ್ಥೆಯ, ಕಾನೂನು ಮಹಾವಿದ್ಯಾಲಯದ, ವಜ್ರ ಮಹೋತ್ಸವಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು. ರಾಜ್ಯ ಉಚ್ಚ ನ್ಯಾಯಾಲಯದ, ನ್ಯಾಯಮೂರ್ತಿಗಳಾದ, ಸುನಿಲದತ್ತ ಯಾದವ, ವೆಂಕಟೇಶ ನಾಯ್ಕ ಹಾಗೂ ಬಸವರಾಜ, ಪಾಲ್ಗೊಂಡಿದ್ದರು.

<><><>

ಧಾರವಾಡದ, ಭಾರತೀಯ ತಂತ್ರಜ್ಞಾನ ಸಂಸ್ಥೆ – ಐ.ಐ.ಟಿ.ಯಲ್ಲಿ, ಶೈಕ್ಷಣಿಕ ಪ್ರಗತಿ, ಸಂಶೋಧನಾ ಕಾರ್ಯಗಳು ಹಾಗೂ ಅಭಿವೃದ್ಧಿ ಕುರಿತ ಸಭೆಯಲ್ಲಿ, ಕೇಂದ್ರ ಶಿಕ್ಷಣ ಖಾತೆ ಸಚಿವ, ಪ್ರಲ್ಹಾದ ಜೋಶಿ ಪಾಲ್ಗೊಂಡು, ಸಮಾಲೋಚಿಸಿದರು. ವಿಕಸಿತ ಭಾರತದ ಕನಸನ್ನು ನನಸಾಗಿಸುವಲ್ಲಿ, ಉನ್ನತ ಶಿಕ್ಷಣ ಸಂಸ್ಥೆಗಳ ಪಾತ್ರ ಅತ್ಯಂತ ಪ್ರಮುಖವಾಗಿದೆ. ವಿಶ್ವ ದರ್ಜೆಯ ಮೂಲಸೌಕರ್ಯ, ಹಸಿರು

ಆವರಣ ಹಾಗೂ ಅತ್ಯಾಧುನಿಕ ಪ್ರಯೋಗಾಲಯಗಳನ್ನು ಹೊಂದಿರುವ, ಐ.ಐ.ಟಿ. ಧಾರವಾಡ, ಭವಿ ್ಯದ ತಂತ್ರಜ್ಞಾನ ನಾಯಕರನ್ನು ರೂಪಿಸುತ್ತಿದೆ. ನಾವೀನ್ಯತೆ, ಉದ್ಯಮಶೀಲತೆ ಮತ್ತು ಪ್ರಾದೇಶಿಕ ಅಭಿವೃದ್ಧಿಯ ಪ್ರಮುಖ ಕೇಂದ್ರವಾಗಿ, ವೇಗವಾಗಿ ಹೊರಹೊಮ್ಮುತ್ತಿದೆ ಎಂದು, ಸಚಿವ ಜೋಶಿ ಶ್ಲಾಘಿಸಿದ್ದಾರೆ.

<><><>

ಕೋಲಾರ ಜಿಲ್ಲೆ, ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿ, ಪೋದ್ದಾರ್ ಪ್ಲಂಬಿಂಗ್ ಸಿಸ್ಟಮ್ಸ್ ಉದ್ಯಮ ಸಮೂಹದ, ಸಾವಿರ ಕೋಟಿ ರೂಪಾಯಿ ಹೂಡಿಕೆಯ, ನೂತನ ಪರಿಸರ ಸ್ನೇಹಿ ಕಾರ್ಖಾನೆಯನ್ನು, ಕೈಗಾರಿಕೆಗಳ ಖಾತೆ ಸಚಿವ ಎಂ.ಬಿ. ಪಾಟೀಲ ಉದ್ಘಾಟಿಸಿದರು. ರಾಜ್ಯ ಸರ್ಕಾರದ, ಕೈಗಾರಿಕಾ ಸ್ನೇಹಿ ನೀತಿಯಿಂದ, ಮೂರು ಸಾವಿರ ನೇರ ಉದ್ಯೋಗಗಳು, ಇಲ್ಲಿ ಸೃಷ್ಟಿಯಾಗಲಿವೆ, ಎಂದರು.

<><><>

ಬೆಂಗಳೂರು–ಮುಂಬೈ ಕೈಗಾರಿಕಾ ಪಥದ ಭಾಗವಾದ, ಧಾರವಾಡ ಕೈಗಾರಿಕಾ ವಲಯದ ಅಭಿವೃದ್ಧಿಗೆ, ಆದ್ಯತೆ ನೀಡುವಂತೆ, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಅಧ್ಯಕ್ಷ ಸಂದೀಪ ಬಿಡಸಾರಿಯಾ, ಒತ್ತಾಯಿಸಿದ್ದಾರೆ. ಸಾವಿರ ಎಕರೆ ಭೂಸ್ವಾಧೀನ, 600 ಕೋಟಿ ರೂಪಾಯಿ ಅನುದಾನ, 30 ಸಾವಿರ ಕೋಟಿ ರೂಪಾಯಿ ಹೂಡಿಕೆ ಆಕರ್ಷಿಸುವ ಮತ್ತು 75 ಸಾವಿರ ಯುವಜನರಿಗೆ, ಉದ್ಯೋಗಾವಕಾಶ ಸೃಷ್ಟಿಸುವ, ಬಜೆಟ್ ಅನುಮೋದಿತ ಯೋಜನೆಯ, ವೇಗ ವರ್ಧಿಸಲು, ಮುಖ್ಯಮಂತ್ರಿಯವರನ್ನು ಕೋರಿದ್ದಾರೆ.

<><><>

ಅತೀ ಉದ್ದದ ಕಡಲ ತೀರವನ್ನು ಹೊಂದಿರುವ, ರಾಜ್ಯಗಳಲ್ಲಿ ಕರ್ನಾಟಕವೂ ಒಂದು. 343 ಕಿಲೋ ಮೀಟರ್ ಉದ್ದದ, ಕರಾವಳಿ ತೀರ ಅಳಿವೆ ಪ್ರದೇಶಗಳನ್ನು, ಕಡಲ ತೀರಗಳನ್ನು ಹಾಗೂ ಕಾಂಡ್ಲ ಕಾಡು ಹೊಂದಿದೆ. ಉತ್ತರಕನ್ನಡ ಜಿಲ್ಲೆಯ, ಕಾರವಾರ ಮತ್ತು ಹೊನ್ನಾವರ ಅರಣ್ಯ ವಲಯಗಳಲ್ಲಿ, ವಿಶ್ವಬ್ಯಾಂಕ್ ನೆರವಿನ ಕೆ–ಶೋರ್ಸ್, ಯೋಜನೆಯಡಿ, ನೀಲಿ ಇಂಗಾಲವನ್ನು ಹೆಚ್ಚಿಸುವ, 5 ಪ್ರಜಾತಿಯ ಕಾಂಡ್ಲ ಸಸಿಗಳನ್ನು ದೇವಬಾಗ ನರ್ಸರಿಯಲ್ಲಿ, ಬೆಳೆಸಲಾಗುತ್ತಿದೆ. ಕಾಳಿ, ಅಘನಾಶಿನಿ, ಶರಾವತಿ ಹಾಗೂ ಗಂಗಾವಳಿ ನದಿಗಳು, ಅರಬ್ಬೀ ಸಮುದ್ರವನ್ನು ಸೇರುವ, ಕಾರವಾರ ಅರಣ್ಯ ವಿಭಾಗದ, 200 ಹೆಕ್ಟರ್‌ನಲ್ಲಿ ಕಾಂಡ್ಲ ಸಸಿಗಳನ್ನು ನೆಡಲಾಗಿದೆ.

ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಉತ್ತರಕನ್ನಡ ಜಿಲ್ಲೆ, ಕುಮಟಾದ, ಹಿರಿಯ ಕಡಲ ಜೀವಶಾಸ್ತ್ರಜ್ಞ, ಪ್ರೊಫೆಸರ್ ವಿ.ಎನ್.ನಾಯಕ.

<><><>

ಪ್ರೊಫೆಸರ್ ವಿ.ಎನ್.ನಾಯಕ ಧ್ವನಿ 60 ಸೆಕೆಂದುಗಳು

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಬೆಂಗಳೂರಿನ ಏವಿಯನ್ ಆ್ಯಂಡ್ ರೆಪ್ಟೈಲ್ ರಿಹ್ಯಾಬಿಲಿಟೇಷನ್ ಟ್ರಸ್ಟ್ – ವೈಲ್ಡ್ ಆರ್ಕ್ ಸಂಸ್ಥೆ, ಇಂದಿನಿಂದ 3 ದಿನಗಳ ಕಾಲ, ಹುಬ್ಬಳ್ಳಿ–ಧಾರವಾಡದಲ್ಲಿ, ಗಾಳಿಪಟ ಹಾರಿಸಲು ಬಳಸಲಾಗುತ್ತಿರುವ ಮಾಂಜಾ ದಾರ ಬಳಕೆ ತಡೆ, ನಿರ್ಮೂಲನೆ ಹಾಗೂ ಯುವಜನ ಜಾಗೃತಿ ಅಭಿಯಾನ ಆಯೋಜಿಸಿದೆ. ವಿಶೇಷ ಉಪಕರಣಗಳನ್ನು ಬಳಸಿ, ನೇತುಬಿದ್ದ ಮಾಂಜಾ ದಾರ, ಸಿಕ್ಕಿಕೊಂಡ ಗಾಳಿಪಟ ಹಾಗೂ ಪಕ್ಷಿ ಮತ್ತು ಜನನಿಬಿಡ ಪ್ರದೇಶಗಳಲ್ಲಿ, ಮಾಂಜಾ ದಾರಗಳನ್ನು ಅರಣ್ಯ, ಪೊಲೀಸ್ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಸಹಯೋಗದೊಂದಿಗೆ, ತೆರವುಗೊಳಿಸಲಿದೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ವೈಲ್ಡ್ ಆರ್ಕ್‌ನ ವನ್ಯಜೀವಿ ರಕ್ಷಣಾ ಪ್ರಬಂಧಕಿ, ಡಾಕ್ಟರ್ ಸುಭೀಕ್ಷಾ ವೆಂಕಟೇಶ.

<><><>

ಡಾ.ಸುಭೀಕ್ಷಾ ವೆಂಕಟೇಶ ಧ್ವನಿ 60 ಸೆಕೆಂದುಗಳು

<><><>

ಆಕಾಶವಾಣಿಯ ಬಹುಶ್ರುತ, 'ಮನ್ ಕಿ ಬಾತ್'ನ, 139ನೇ ಸಂಚಿಕೆ, ಇಂದು, ಭಾನುವಾರ ಬೆಳಗ್ಗೆ 11 ಗಂಟೆಗೆ, ಪ್ರಸಾರವಾಗಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ತಮ್ಮ ಮನದ ಮಾತು ಹಂಚಿಕೊಳ್ಳಲಿದ್ದಾರೆ. ಆಕಾಶವಾಣಿ ಹಾಗೂ ದೂರದರ್ಶನ ಸೇರಿದಂತೆ, ನ್ಯೂಸ್ ಆನ್ ಏರ್ ಆಪ್‌ನಲ್ಲೂ, ಏಕಕಾಲಕ್ಕೆ ಪ್ರಸಾರವಾಗಲಿದೆ. ಬಳಿಕ, ಕನ್ನಡ ಹಾಗೂ ಇತರೆ ಪ್ರಾದೇಶಿಕ ಭಾಷೆಗಳಲ್ಲಿ, ಮನದ ಮಾತು ಬಿತ್ತರವಾಗಲಿದೆ.

<><><>

ಹಲಗಲಿ ಬೇಡರ ಬಂಡಾಯದ ಇತಿಹಾಸದ ಕುರಿತ, ಜನಜಾಗೃತಿಗಾಗಿ, ವೀರಜ್ಯೋತಿ ಕಾಲ್ನಡಿಗೆ ಯಾತ್ರೆಗೆ, ಬಾಗಲಕೋಟೆ ಜಿಲ್ಲೆ, ಮುಧೋಳ ತಾಲೂಕಿನ, ಹಲಗಲಿ ಗ್ರಾಮದಲ್ಲಿ, ಚಾಲನೆ ನೀಡಲಾಗಿದೆ. ಹಲಗಲಿ ಬಂಡಾಯದ, ವೀರರ ಸ್ಮರಣಾರ್ಥ, ವೀರಜ್ಯೋತಿಯನ್ನು ಕೊಂಡೊಯ್ಯಲಾಗುತ್ತಿದ್ದು, ನಾಳೆ ವಾಳಕಿ ಗ್ರಾಮವನ್ನು ತಲುಪಲಿದೆ. ಮಹರ್ಷಿ ವಾಲ್ಮೀಕಿ ಜಯಂತಿ ಉತ್ಸವವನ್ನು, ವಿಶೇ 'ವಾಗಿ ಆಚರಿಸಲು ಸಿದ್ಧತೆಗಳು ನಡೆದಿವೆ.

<><><>

ಸಂಕ್ಷಿಪ್ತ ಸುದ್ದಿಗಳು

<><><>

ಕಿತ್ತೂರು ರಾಣಿ ಚನ್ನಮ್ಮಾಜಿ ಅವರ, 202ನೇ ವಿಜಯೋತ್ಸವದ, ಕಿತ್ತೂರು ಉತ್ಸವ ಇಂದು ಸಂಜೆ ಸಮಾರೋಪಗೊಳ್ಳಲಿದ್ದು, ಬೆಳಗಾವಿ ಜಿಲ್ಲೆ, ಕಿತ್ತೂರಿನ ಕೋಟೆ ಆವರಣದ ವೇದಿಕೆಯಲ್ಲಿ, ಮುಖ್ಯಮಂತ್ರಿ ಪಾಲ್ಗೊಳ್ಳಲಿದ್ದಾರೆ.

<><><>

ಚಾಮರಾಜನಗರದ, ಡಾಕ್ಟರ್ ಬಿ.ಆರ್.ಅಂಬೇಡ್ಕರ ಕ್ರೀಡಾಂಗಣದಲ್ಲಿ, 'ಮಹಾಪ್ರಜ್ಞೆಯೆಡೆಗೆ ಪಯಣ' ಎಂಬ, ಧ್ಯೇಯದೊಂದಿಗೆ ಆಯೋಜಿತ, ಅಂತಾರಾಷ್ಟ್ರೀಯ ಬೌದ್ಧ ಸಮ್ಮೇಳನದ ಸಮಾರೋಪ, ಇಂದು ಸಂಜೆ ಜರುಗಲಿದ್ದು, ಮುಖ್ಯಮಂತ್ರಿ ಭಾಗವಹಿಸಲಿದ್ದಾರೆ.

<><><>

ವಿಧಾನ ಪರಿಷತ್, ಚುನಾವಣಾ ನೀತಿ ಸಂಹಿತೆ, ಜಾರಿಯಲ್ಲಿರುವ ಹಿನ್ನೆಲೆ, ಮಹರ್ಷಿ ವಾಲ್ಮೀಕಿ ಜಯಂತಿಯನ್ನು, ನಾಳೆ ಸೋಮವಾರ ಶಿಷ್ಟಾಚಾರದೊಂದಿಗೆ ಆಚರಿಸಲಾಗುತ್ತಿದೆ.

<><><>

ಗದಗ ಜಿಲ್ಲಾ ಮಟ್ಟದ, ವಿದ್ಯಾರ್ಥಿಗಳ ಯುವ ಸಂಸತ್ ಪೂರ್ವ ತರಬೇತಿ ಶಿಬಿರ, ಜಿಲ್ಲಾಡಳಿತ ಭವನದಲ್ಲಿ, ಜರುಗಿತು. ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ ಹಾಗೂ 240 ವಿದ್ಯಾರ್ಥಿಗಳು, ಭಾಗವಹಿಸಿದ್ದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- **ಸರ್ವೋಚ್ಚ ನ್ಯಾಯಾಲಯದ** ತೀರ್ಪುಗಳನ್ನು, ಕನ್ನಡದಲ್ಲಿ ಲಭ್ಯವಾಗಿಸಲು, ಕ್ರಮ – ನ್ಯಾಯಮೂರ್ತಿ, ಪ್ರಸನ್ನ ವರಾಳೆ.
- **ಧಾರವಾಡ ಐ.ಐ.ಟಿ.:** ಕೇಂದ್ರ ಶಿಕ್ಷಣ ಖಾತೆ ಸಚಿವ, ಪ್ರಲ್ಹಾದ ಜೋಶಿ ಅವರಿಂದ, ಶೈಕ್ಷಣಿಕ ಪ್ರಗತಿ, ಪರಿಶೀಲನೆ.
- **ಉತ್ತರಕನ್ನಡ ಜಿಲ್ಲೆ, ದೇವಬಾಗ** ಸಸ್ಯೋದ್ಯಾನದಲ್ಲಿ, 5 ಪ್ರಜಾತಿಯ ಕಾಂಡ್ಲ ಸಸಿಗಳ ಪೋಷಣೆ.
- **ಪ್ರಧಾನಮಂತ್ರಿಯವರ, 'ಮನ್ ಕಿ ಬಾತ್':** ಇಂದು, ಬೆಳಗ್ಗೆ 11 ಗಂಟೆಗೆ, ಪ್ರಸಾರ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>